ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಕೆ. ಎಂ. ಎಫ್ ನಿಂದ ಸರಬರಾಜು ಆಗುತ್ತಿರುವ ಹಾಲಿನ ಉತ್ಪನ್ನಗಳ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

690 (843) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ನಂದಿನಿ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಲು ನಂದಿನಿ ಸಂಚಾರಿ ವಾಹನಕ್ಕೆ ಚಾಲನೆ ನೀಡಲಾಗಿದ್ದು, ಈ ಯೋಜನೆಯು ಯಶಸ್ವಿಯಾಗಿದೆಯೇ;

(ಆ) ಯಶಸ್ವಿಯಾಗಿದ್ದಲ್ಲಿ, ಇತರೆ ಜಿಲ್ಲೆಗಳಲ್ಲೂ ಸಂಚಾರಿ ವಾಹನಗಳಿಗೆ ಚಾಲನೆ ನೀಡುವ ಆಲೋಚನೆಯಿದೆಯೇ;

(ಇ) ನಂದಿನಿ ಸಂಚಾರಿ ವಾಹನಗಳಿಂದ ವ್ಯಾಪಾರ ನಡೆಸಲು ಇದರ ಪ್ರಾಂಚೈಸಿಯನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳೇನು;

(ಈ) ನಂದಿನಿ ಬೂತ್/ಪಾರ್ಲರ್‌ಗಳಲ್ಲಿ ಕೇವಲ ಬಾದಾಮಿ ಹಾಲು ಅಥವಾ ಕಾಫಿ ಮಾತ್ರ ಮಾರಲು ಕಡ್ಡಾಯ ಆದೇಶವೇನಾದರೂ ಇದೆಯೇ; ಅಥವಾ ಟೀ, ಕಷಾಯಗಳನ್ನು ಮಾರಬಹುದೇ;

(ಉ) ರಾಜ್ಯದಲ್ಲಿರುವ ಒಟ್ಟು ನಂದಿನಿ ಪಾರ್ಲರ್ ಕೆ. ಎಂ. ಎಫ್. ನಿಂದ ಯಾವ ಯಾವ ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಹಾಲನ್ನು ಸರಬರಾಜು ಮಾಡಲಾಗುತ್ತಿದೆ?